# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಅ/ವಾರ್ಡ್ ಸಭೆ/193/ಸಭೆ-5/2020-21 ದಿನಾಂಕ: 05.12.2020.

## ಅರಕೆರೆ ವಾರ್ಡ್ ನಂ 193ರಲ್ಲಿ ನಡೆದ ವಾರ್ಡ್ ಸಭೆಯ ನಡಾವಳಿಗಳು

ದಿನಾಂಕ 05.12.2020 ರಂದು ಅರಕೆರೆ ಉಪವಿಭಾಗದ ವಾರ್ಡ್ ನಂ 193 ರ ಅರಕೆರೆ ವ್ಯಾಪ್ತಿಯ ಅರಕೆರೆ ಮೈಕೋ ಬಡಾವಣೆಯ ಸಮುದಾಯ ಭವನದಲ್ಲಿ ಶ್ರೀ ರಮೇಶ್. ಎಸ್. ಮುಖ್ಯ ಅಭಿಯಂತರರು) ನೋಡಲ್ ಅಧಿಕಾರಿಗಳು, ಅರಕೆರೆ ವಾರ್ಡ್ ನಂ 193 ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡಾವಳಿ.

ಹಾಜರಿದ್ದವರು.

| ಕ್ರಮ ಸಂ | ಸದಸ್ಯರ ಹೆಸರು | ಪದನಾಮ / ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ ಮಂಜುನಾಥ್ | ಸಹ ಕಂದಾಯ ಅಧಿಕಾರಿ. ಅರಕೆರೆ ಉಪವಲಯ | ಹಾಜರಿದ್ದರು |
| 2 | ಶ್ರೀ ಮುನಿಕೃಷ್ಣ. ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು. | ಹಾಜರಿದ್ದರು. |
| 3 | ಶ್ರೀ ಕೀರ್ತಿರಾಜ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿದ್ದರು |
| 4 | ಶ್ರೀ ಜಾನ್ ಬಾಸ್ಕೋ | ಅರಕೆರೆ ಕೋವಿಡ್ ವಾರ್‌ರೂಂ ಅರಕೆರೆ | ಹಾಜರಿದ್ದರು |
| 5 | ಶ್ರೀ ಪ್ರಕಾಶ್ | ಕಂದಾಯ ವಸೂಲಿಗಾರರು | ಹಾಜರಿದ್ದರು |
| 6 | ಶ್ರೀ ಕೃಷ್ಣ | ಕಂದಾಯ ವಸೂಲಿಗಾರರು | ಹಾಜರಿದ್ದರು |
| 7 | ಶ್ರೀ ದೀಪಕ್ | ಕಂದಾಯ ವಸೂಲಿಗಾರರು | ಹಾಜರಿದ್ದರು |
| 8 | ಶ್ರೀ ಕೃಷ್ಣಕುಮಾರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು. ಮೇಜರ್ ರೋಡ್ಸ್ | |
| 9 | ಶ್ರೀ ಎ.ಬಿ.ಹೆಚ್ ನಾಯಕ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ. | ಹಾಜರಿದ್ದರು. |
| 10 | ಶ್ರೀ ನಾರಾಯಣ್ | ಸಹಾಯಕ ಅಭಿಯಂತರರು. ಬೆಸ್ಕಾಂ. | ಹಾಜರಿದ್ದರು |
| 11 | ಶ್ರೀ ವೆಂಕಟೇಶ್. ಟಿ | ವಾರ್ಡ್ ಮಾರ್ಷಲ್ | ಹಾಜರಿದ್ದರು |
| 12 | ಶ್ರೀ ಮನು | ವಾರ್ಡ್ ಮಾರ್ಷಲ್ | ಹಾಜರಿದ್ದರು |
| 13 | ಶ್ರೀ ಶಿವಣ್ಣ, ಸೋಮಣ್ಣ. ಆದಿನಾರಾಯಣ್, ನಾರಾಯಣ ಸ್ವಾಮಿ. ನೀಲ ಪ್ರಸಾದ್ | ಕಸ ವಿಲೇವಾರಿ ಮೇಲ್ವಿಚಾರಕರು. | ಹಾಜರಿದ್ದರು |
| 14 | ಶ್ರೀ ಜೈ ಪ್ರಕಾಶ್ | ಸಹಾಯಕ ಅಭಿಯಂತರರು, ಬೆಂಗಳೂರು ಜಲಮಂಡಳಿ. | ಹಾಜರಿದ್ದರು |
| 15 | ಶ್ರೀ ಪವನ್ ಕುಮಾರ್ | ಆರ್.ಎಫ್.ಓ ಅರಣ್ಯ ಇಲಾಖೆ. | ಹಾಜರಿದ್ದರು |

| | | | |
|---|---|---|---|
| 16 | ಶ್ರೀ ರೂಪೇಶ್ | ಸಹ ನೋಡಲ್ ಅಧಿಕಾರಿಗಳು ಕೋವಿಡ್–19. | ಹಾಜರಿದ್ದರು |
| 17 | ಶ್ರೀ ಮಿಥುನ್ | ಸಾರ್ವಜನಿಕರು ಅವಣಿ ಶೃಂಗೇರಿ ನಗರ | ಹಾಜರಿದ್ದರು |
| 18 | ಭಾಸ್ಕರ್‌ರೆಡ್ಡಿ | ಸಾರ್ವಜನಿಕರು ಶಾಂತಿನಿಕೇತನ ಬಡಾವಣೆ. | ಹಾಜರಿದ್ದರು |
| 19 | ಪ್ರಜ್ವಲ್ | ಕೆಂಪಮ್ಮ ಬಡಾವಣೆಯ ಸಾರ್ವಜನಿಕರು | ಹಾಜರಿದ್ದರು |
| 20 | ಶ್ರೀಧರ್ ಹೆಗ್ಡೆ. | ಸಾರ್ವಜನಿಕರು ಅವಣಿ ಶೃಂಗೇರಿ ನಗರ | ಹಾಜರಿದ್ದರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

| | |
|---|---|
| ವಿಷಯ–22 | ಹಿಂದಿನ ಸಭೆಯ ನಡವಳಿಯನ್ನು ಓದಿ ರೆಕಾರ್ಡ್ ಮಾಡುವುದು. |
| ತೀರ್ಮಾನ | ವಿಷಯ ಸಂಖ್ಯೆ 16 ರಿಂದ 21ರ ವರೆಗಿನ ಹಿಂದಿನ ಸಭೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ವಿಷಯ ಮತ್ತು ತೀರ್ಮಾನವನ್ನು ಓದಿ ರೆಕಾರ್ಡ್ ಮಾಡಲಾಯಿತು. |

<u>23 ಆರೋಗ್ಯ/ಘನ ತ್ಯಾಜ್ಯ ಇಲಾಖೆ :–</u> ವಾರ್ಡ್ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಕಸವಿಲೇವಾರಿಯ ಬಗ್ಗೆ ಮಾಹಿತಿಯನ್ನು ಕಿರಿಯ ಆರೋಗ್ಯ ಪರಿವೀಕ್ಷಕರು ನೀಡಿದರು ಹಾಗೂ ಹಾಲಿ ವಾರ್ಡ್ ವ್ಯಾಪ್ತಿಯಲ್ಲಿ ಇರುವ ಘನ ತ್ಯಾಜ್ಯಕ್ಕೆ ಸಂಬಂಧಿಸಿದ ಈ ಕೆಳಕಂಡ ಮಾಹಿತಿಯನ್ನು ಸಭೆಗೆ ತಿಳಿಸಿದರು.

ರಸ್ತೆ ಬದಿಯಲ್ಲಿ ಮಾಂಸದ ಅಂಗಡಿಗಳಿಗೆ ಗ್ಲಾಸ್‌ಗಳನ್ನು ಅಳವಡಿಸದೇ ಹಾಗೇಯೇ ವ್ಯಾಪಾರ ಮಾಡುತ್ತಿರುವ ಬಗ್ಗೆ ಹುಳಿಮಾವು ಗ್ರಾಮದಲ್ಲಿ ದೂರು ಬಂದಿದ್ದು ಹಿರಿಯ ಆರೋಗ್ಯ ಪರಿವೀಕ್ಷಕರು ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಶಾಂತಿನಿಕೇತನ ಬಡಾವಣೆಯ ನಿವಾಸಿಯಾದ ಶ್ರೀ ಭಾಸ್ಕರ್‌ರೆಡ್ಡಿ ರವರು 80 ಅಡಿ ರಸ್ತೆಯ ಹಾಗೂ ಬಡಾವಣೆಯ ಕೆಲವು ಕಡೆಗಳಲ್ಲಿ ಕಸ ವಿಲೇವಾರಿಯಾಗದೇ ಇರುವ ಬಗ್ಗೆ ಸಭೆಯ ಗಮನಕ್ಕೆ ತಂದು ಹಾಗೂ ಕಸ ವಿಂಗಡಣೆಯ ಬಗ್ಗೆ ಬಡಾವಣೆಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಹಾಗೂ ಈ ಕಾರ್ಯಕ್ರಮಕ್ಕೆ ನಮ್ಮೆಲ್ಲರ ಸಹಕಾರ ಕೊಡುವುದಾಗಿ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ವಿಷಯದ ಬಗ್ಗೆ ಮಾತನಾಡುತ್ತಾ ಕಸವಿಲೇವಾರಿಯಾಗದೇ ಇರುವ ಬಗ್ಗೆ ತಕ್ಷಣ ಕ್ರಮಕೈಗೊಳ್ಳುವುದಾಗಿ ಹಾಗೂ ಮುಂದಿನ ದಿನಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿ ಸಭೆಗೆ ತಿಳಿಸಿದರು.

<u>24 ಕಾಮಗಾರಿ ಇಲಾಖೆ:–</u> ಅರಕೆರೆ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಹಾಗೂ ಬೃಹತ್ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳು ತುರ್ತಾಗಿ ಮುಚ್ಚುವುದಕ್ಕೆ ಕ್ರಮ ಕೈಗೊಳ್ಳಲು ಕಳೆದ ಸಭೆಯಲ್ಲಿ ಸೂಚಿಸಿರುವುದಾಗಿ ಮಾನ್ಯ ಅಧ್ಯಕ್ಷರು ತಿಳಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಬಿದ್ದಿರುವ ಗುಂಡಿ ಮುಚ್ಚುವ ಕಾಮಗಾರಿಯು ಪ್ರಗತಿಯಲ್ಲಿರುವುದಾಗಿ ಹಾಗೂ ಗುಂಡಿ ಮುಚ್ಚುವ ಕಾಮಗಾರಿಯ ಕಾರ್ಯದೇಶವನ್ನು ತುರ್ತಾಗಿ ನೀಡಲು ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ ರವರಿಗೆ ತಿಳಿಸಲು ಮಾನ್ಯ ಅಧ್ಯಕ್ಷರು ಹಿಂದಿನ ಸಭೆಯಲ್ಲಿ ವಿಷಯ ಸಂಖ್ಯೆ 18 ರಲ್ಲಿ ಸೂಚಿಸಿದ್ದರು.

ಈ ಮೇರೆಗೆ ಸಭೆಯಲ್ಲಿ ಹಾಜರಿದ್ದ ಕಾಮಗಾರಿ ಇಲಾಖೆರವರು ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯ ಕಾರ್ಯದೇಶವನ್ನು ನೀಡಿರುವುದಾಗಿ ಹಾಗೂ ಕಾಮಗಾರಿ ಪ್ರಗತಿಯಲ್ಲಿರುವುದಾಗಿ ತಿಳಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಅನುಮೋದನೆಗೊಂಡು ಬಾಕಿ/ಪ್ರಾರಂಭಿಸದೇ ಇರುವ ಟೆಂಡರ್ ಕಾಮಗಾರಿಗಳನ್ನು ತಕ್ಷಣ ಟೆಂಡರ್ ಪ್ರಕ್ರಿಯೆ ಮುಗಿಸದೆ ಹಾಗೂ ಕಾರ್ಯದೇಶವನ್ನು ನೀಡದೇ ಇರುವುದು ಕಾಮಗಾರಿಗಳ ಪ್ರಗತಿ ವರದಿಯ ಪಟ್ಟಿಯನ್ನು ಪರಿಶೀಲಿಸಿದಾಗ ವಾರ್ಡ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುತ್ತವೆ ಇದರಿಂದ ಸಾರ್ವಜನಿಕರಿಂದ ಸಹಾಯ-2.0 ಮತ್ತು ಇನ್ನಿತರೆ ಆನ್‌ಲೈನ್ ದೂರುಗಳು ಬಂದಿರುತ್ತವೆ ಈ ಬಗ್ಗೆ ತುರ್ತಾಗಿ ಕ್ರಮವಹಿಸಿ ವಾರ್ಡ್ ವ್ಯಾಪ್ತಿಯ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯದೇಶವನ್ನು ತಕ್ಷಣ ನೀಡಲು ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗರವರಿಗೆ ಮಾನ್ಯ ಅಧ್ಯಕ್ಷರು ಈ ಹಿಂದಿನ ಸಭೆಯ ವಿಷಯ ಸಂಖ್ಯೆ 18ರಲ್ಲಿ ಸೂಚಿಸಿರುತ್ತಾರೆ.

ಅದರಂತೆ ಟೆಂಡರ್ ಪ್ರಕ್ರಿಯೆ ಮುಗಿದ ಕೆಲವು ಕಾಮಗಾರಿಗಳಿಗೆ ಕಾರ್ಯದೇಶ ನೀಡಲಾಗಿದ್ದು, ಕಾರ್ಯದೇಶ ನೀಡಿರುವ ಕಾಮಗಾರಿಗಳು ಈಗಾಗಲೇ ಪ್ರಾರಂಭಿಸಿ ಪ್ರಗತಿಯಲ್ಲಿರುವುದಾಗಿ ಸಭೆಗೆ ಕಾಮಗಾರಿ ಇಲಾಖೆಯವರು ತಿಳಿಸಿದರು.

ಅವನಿ ಶೃಂಗೇರಿ ನಗರದ ನಿವಾಸಿಯಾದ ಮಿಥುನ್ ರವರು ಅವನಿ ಶೃಂಗೇರಿ ನಗರದ ಮುಖ್ಯ ರಸ್ತೆ ಹಾಳಾಗಿದ್ದು, ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರ ಓಡಾಟಕ್ಕೆ ತುಂಬಾ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು ಧನುಷ್ ಅಪಾರ್ಟ್‌ಮೆಂಟ್ ಎದುರು ನಿರ್ಮಿಸುತ್ತಿರುವ ಕಟ್ಟಡದ ಬಗ್ಗೆ ಮಾಹಿತಿ ಮತ್ತು ರಸ್ತೆಗೆ ಹಾಕಿರುವ ಜಾಹಿರಾತು ಫಲಕವನ್ನು ತೆರವುಗೊಳಿಸಲು ಕೋರಿದರು.

ಸಭೆಯಲ್ಲಿ ಹಾಜರಿದ್ದ ಕಾಮಗಾರಿ ಇಲಾಖೆರವರು ಅವನಿ ಶೃಂಗೇರಿ ನಗರ ಮುಖ್ಯ ರಸ್ತೆಯ ಡಾಂಬರೀಕರಣ ಕಾಮಗಾರಿಯು ಟೆಂಡರ್ ಪ್ರಕ್ರಿಯೆ ಮುಗಿದು ಅನುಮೋದನೆಗಾಗಿ ಕೇಂದ್ರ ಕಛೇರಿಗೆ ಕಡತ ಸಲ್ಲಿಸಲಾಗಿದ್ದು ಕಾರ್ಯದೇಶ ನೀಡಿದ ನಂತರ ರಸ್ತೆ ಕಾಮಗಾರಿ ಪ್ರಾರಂಭಿಸುವುದಾಗಿ ತಿಳಿಸುತ್ತಾ ಕಟ್ಟಡ ನಿರ್ಮಾಣದ ಬಗ್ಗೆ ತುರ್ತಾಗಿ ಮಾಹಿತಿ ನೀಡುವುದಾಗಿ ಮತ್ತು ಜಾಹಿರಾತು ಫಲಕವನ್ನು ತೆರವುಗೊಳಿಸುವುದಾಗಿ ತಿಳಿಸಿದರು.

25 <u>ಕೋವಿಡ್19ರ ಸಾಂಕ್ರಾಮಿಕ ರೋಗದ ಬಗ್ಗೆ:-</u> ಅರಕೆರೆ ವಾರ್ಡ್ ವ್ಯಾಪ್ತಿಯ ನೋಡಲ್ ಅಧಿಕಾರಿಗಳು ಹಾಜರಿದ್ದು ಕೋವಿಡ್-19ರ ಟೆಸ್ಟಿಂಗ್ ಕ್ಯಾಂಪ್‌ಗಳ ಬಗ್ಗೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆಯುತ್ತಿರುವ ಟೆಸ್ಟಿಂಗ್‌ನ ಮಾಹಿತಿಯನ್ನು ಸಭೆಗೆ ವಿವರಿಸಿದರು.

ಅರಕೆರೆ ವಾರ್ಡ್ ವ್ಯಾಪ್ತಿಯಲ್ಲಿ ನವೆಂಬರ್ ತಿಂಗಳಲ್ಲಿ ಒಟ್ಟು 12843 ಟೆಸ್ಟಿಂಗ್‌ಗಳಾಗಿದ್ದು 123 ಪಾಸಿಟಿವ್ ಕೇಸ್ ದಾಖಲಾಗಿರುತ್ತದೆ ಎಂದು ಸಭೆಗೆ ವಿವರಿಸಿದರು.

26 <u>ವಾರ್ಡ್ ವ್ಯಾಪ್ತಿಯ ವಿವಿಧ ಇಲಾಖೆಗಳ ಪ್ರಗತಿಯಲ್ಲಿರುವ ಕಾಮಗಾರಿಗಳ ಬಗ್ಗೆ ಚರ್ಚಿಸುವುದು.</u>

- ಅರಣ್ಯ ಇಲಾಖೆ:- ಅರಕೆರೆ ಮೈಕೋ ಬಡಾವಣೆಯ ಆಟದ ಮೈದಾನದಲ್ಲಿ ಬೀಳುವ ಹಂತದಲ್ಲಿರುವ ದೊಡ್ಡದಾದ ಮರಗಳನ್ನು ತಕ್ಷಣ ತೆಗೆಯಲು ಬಡಾವಣೆಯ ನಿವಾಸಿಗಳು ಕೋರಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಅರಣ್ಯಾಧಿಕಾರಿಗಳು ತುರ್ತಾಗಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.
- ಬೃಹತ್ ರಸ್ತೆಗಳು:-. ಅರಕೆರೆ ಮೈಕೋ ಬಡಾವಣೆಯ ಮುಖ್ಯ ರಸ್ತೆ (ಗಣೇಶ ದೇವಸ್ಥಾನದ ಪಕ್ಕದ ರಸ್ತೆ)ಯಲ್ಲಿ ಕಲ್ವರ್ಟ್ ಇಲ್ಲದೆ ಮಳೆ ಬಂದಾಗ ನೀರು ಹರಿಯದೇ ರಸ್ತೆಯ ಮೇಲೆ ನಿಂತಿದ್ದು ಇದರಿಂದ ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರ ಓಡಾಟಕ್ಕೆ

ತೊಂದರೆಯಾಗುತ್ತಿರುವುದಾಗಿ ಬಡಾವಣೆಯ ನಿವಾಸಿಗಳು ದೂರನ್ನು ನೀಡಿರುತ್ತಾರೆ. ಈ ವಿಷಯದ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಬೃಹತ್ ರಸ್ತೆಗಳು (ಯೋಜನೆ )ರವರ ಗಮನಕ್ಕೆ ತರುಲು ಮಾನ್ಯ ಅಧ್ಯಕ್ಷರು ಹಿಂದಿನ ಸಭೆಯ ವಿಷಯ ಸಂಖ್ಯೆ-20 ರಲ್ಲಿ ಸೂಚಿದ್ದರು.

- ಅವಣಿ ಶೃಂಗೇರಿ ನಗರದ ನಿವಾಸಿಯಾದ ಶ್ರೀ ಶ್ರೀಧರ್ ಹೆಗ್ಡೆರವರು ವಿಶ್ವೇಶ್ವರಯ್ಯ ಮುಖ್ಯ ರಸ್ತೆಯಲ್ಲಿ ಚರಂಡಿ ಮೇಲೆ ಸ್ಲ್ಯಾಬ್‌ಗಳನ್ನು ಹಾಕಲು ಕೋರಿರುತ್ತಾರೆ.

  ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ರಸ್ತೆಗಳು ರವರು ಈಗಾಗಲೇ ಕಲ್ವರ್ಟ್ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಿದ್ದು, ತುರ್ತಾಗಿ ಪೂರ್ಣಗೊಳಿಸುವುದಾಗಿ ತಿಳಿಸಿದರು.

  ವಿಶ್ವೇಶ್ವರಯ್ಯ ರಸ್ತೆಯ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಈಗಾಗಲೇ ಕಾರ್ಯದೇಶ ನೀಡಲಾಗಿದ್ದು ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸುವುದಾಗಿ ಸಭೆಗೆ ವಿವರಿಸಿದರು.

- <u>ಬೃಹತ್ ರಾಜಕಾಲುವೆ:-</u> ವಾರ್ಡ್ ವ್ಯಾಪ್ತಿಯಲ್ಲಿ ಸ್ಥಗಿತಗೊಂಡಿರುವ ರಾಜಕಾಲುವೆ ನಿರ್ಮಾಣ ಕಾಮಗಾರಿಗಳ ಬಗ್ಗೆ ಸಹಾಯ -2.0 ರಲ್ಲಿ ಹೆಚ್ಚು ದೂರುಗಳು ಬಂದಿದ್ದು ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುತ್ತದೆ. ಈ ಕೂಡಲೇ ಸಂಬಂಧಪಟ್ಟ ಬೃಹತ್ ಕಾಲುವೆಗಳ ವಿಭಾಗದ ಅಧಿಕಾರಿಗಳ ಗಮನಕ್ಕೆ ತಂದು ಕೂಡಲೇ ಸ್ಥಗಿತಗೊಂಡಿರುವ ಕಾಮಗಾರಿಗಳನ್ನು ಪ್ರಾರಂಭಿಸಲು ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

  ಕೆಂಪಮ್ಮ ಬಡಾವಣೆಯ ಸ್ಮಶಾನದ ಪಕ್ಕದಲ್ಲಿ ಹಾಲಿ ನಿರ್ಮಿಸುತ್ತಿರುವ ರಾಜಕಾಲುವೆ ಕಾಮಗಾರಿ ಸ್ಥಗಿತಗೊಂಡಿದ್ದು, ನೀರು ಸರಾಗವಾಗಿ ಹರಿಯದೆ ಹಾಗೂ ಕಾಂಪೌಂಡ್ ಗೋಡೆ ಬಿದ್ದಿದ್ದು ಈ ಬಗ್ಗೆ ಸ್ಥಳೀಯ ನಿವಾಸಿಯಾದ ಪ್ರಜ್ವಲ್‌ರವರು ಸರಿಪಡಿಸಿಕೊಡಲು ಕೋರಿರುತ್ತಾರೆ.

- <u>ಬಿಡ್ಲ್ಯೂ.ಎಸ್.ಎಸ್.ಬಿ:-</u> ವಾರ್ಡ್ ವ್ಯಾಪ್ತಿಯಲ್ಲಿ ಹಿಂದಿನ ಸಭೆಗಳಲ್ಲಿ ನೀರು ಮತ್ತು ಒಳಚರಂಡಿ ಕಾಮಗಾರಿಗಳಿಗಾಗಿ ಅಗೆದ ರಸ್ತೆಗಳನ್ನು ಯಥಾ ಸ್ಥಿತಿಗೆ ತರುಲು ಹಾಗೂ ಹುಳಿಮಾವು ಕೆರೆ ರಸ್ತೆಯಲ್ಲಿ ಒಳಚರಂಡಿ ಮ್ಯಾನ್‌ಹೋಲ್‌ಗಳು ಬಿದ್ದುಹೋಗಿದ್ದು ಸಾರ್ವಜನಿಕರ ಓಡಾಟಕ್ಕೆ ತುಂಬಾ ತೊಂದರೆಯಾಗಿರುವುದಾಗಿ ಕೂಡಲೇ ಕ್ರಮಕೈಗೊಳ್ಳುಲು ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

- <u>ಬೆಸ್ಕಾಂ ಇಲಾಖೆ:-</u> ಬೆಸ್ಕಾಂ ಇಲಾಖೆಯ ವತಿಯಿಂದ ವಿದ್ಯುತ್ ಕಂಬಗಳ ದುರಸ್ಥಿ ಸಮಯದಲ್ಲಿ ಅಡ್ಡಲಾಗಿ ಇರುವ ಮರದ ಕೊಂಬೆಗಳನ್ನು ಕತ್ತರಿಸಿ ರಸ್ತೆಯ ಬದಿಯಲ್ಲಿ ಹಾಗೆ ಬಿಟ್ಟಿರುವುದಾಗಿ ಇದರಿಂದ ರಸ್ತೆ ಸ್ವಚ್ಛತಾ ಕಾರ್ಯಕ್ಕೆ ತೊಂದರೆಯಾಗುತ್ತಿರುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳು ಸ್ಥಳ ತಿಳಿಸಿದರೆ ಕೂಡಲೇ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

- <u>ಕಂದಾಯ ಇಲಾಖೆ:-</u> ಕಂದಾಯ ಇಲಾಖೆ ಕಛೇರಿಯಲ್ಲಿ ಕಂದಾಯ ವಸೂಲಿ ಕಾರ್ಯ ಸಮರ್ಪಕವಾಗಿ ನಡೆಯುತ್ತಿರುತ್ತದೆ ಹಾಗೂ ಹುಳಿಮಾವು ಗ್ರಾಮದಲ್ಲಿರುವ ಕಂದಾಯ ವಸೂಲಿ ಕಛೇರಿಗೆ ಸರಿಯಾದ ಶೌಚಾಲಯದ ವ್ಯವಸ್ಥೆ ಹಾಗೂ ಕಾಂಪೌಂಡ್ ಇಲ್ಲದೆ ಸದರಿ ಕಟ್ಟಡದಲ್ಲಿಯೇ ಅಂಗನವಾಡಿ ಕೇಂದ್ರವು ಸಹ ಕಾರ್ಯನಿರ್ವಹಿಸುತ್ತಿದ್ದು ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿರುವುದಾಗಿ ಕೂಡಲೇ ಶೌಚಾಲಯದ ವ್ಯವಸ್ಥೆ ಹಾಗೂ ತಾತ್ಕಾಲಿಕವಾಗಿಯಾದರು ಕಟ್ಟಡದ ಸುತ್ತಲು ಫೆನ್ಸಿಂಗ್ ಅಳವಡಿಸಿಕೊಡಲು ಕೋರಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಕಾಮಗಾರಿ ಇಲಾಖೆಯ ಅಧಿಕಾರಿಗಳು ಶೌಚಾಲಯದ ನಿರ್ಮಾಣ ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ ಎಂದು ಕಾಮಗಾರಿ ಇಲಾಖೆಯಿಂದ ತಿಳಿಸಿರುತ್ತಾರೆ.

<u>27 ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆ ಚರ್ಚಿಸಿದ ವಿಚಾರ.</u>

- ಮಾನ್ಯ ಆಯುಕ್ತರ ಆದೇಶದಂತೆ 2021-22ನೇ ಸಾಲಿನ ಆಯವ್ಯಯಕ್ಕೆ **"MY CITY MY BUDGET"** ಶೀರ್ಷಿಕೆಯಡಿಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ, ಪಾದಚಾರಿ ಮಾರ್ಗಗಳ ನಿರ್ಮಾಣದ ಹಾಗೂ ಸ್ಥಳ ಗುರುತಿಸುವ ಬಗ್ಗೆ ರೆಸಿಡೆನ್ಸಿಯಲ್ ಕ್ಷೇಮಾಭಿವೃದ್ಧಿ ಸಂಘ ಸಂಸ್ಥೆಗಳು ಹಾಗೂ ನಿವಾಸಿಗಳಿಂದ ಸಲಹೆಗಳನ್ನು ನೀಡಲು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿರುತ್ತಾರೆ.

  ಅರಕೆರೆ ವಾರ್ಡ್ ವ್ಯಾಪ್ತಿಗೆ ಹಾಲಿ ಇದ್ದ ಸಹಾಯಕ ಅಭಿಯಂತರರು, ನಿವೃತ್ತಿ ಹೊಂದಿದ್ದು ಕೂಡಲೇ ಖಾಯಂ ಅಭಿಯಂತರರನ್ನು ನಿಯೋಜಿಸಲು ಮೇಲಾಧಿಕಾರಿಗಳ ಗಮನಕ್ಕೆ ತರಲು ಸಭೆಯಲ್ಲಿ ತೀರ್ಮಾನಿಸಲಾಯಿತು.
- ಬನ್ನೇರುಘಟ್ಟ ರಸ್ತೆಯಲ್ಲಿ ಮೆಟ್ರೋ ಕಾಮಗಾರಿ ಪ್ರಗತಿಯಲ್ಲಿದ್ದು ಇದರಿಂದ ಸಾರ್ವಜನಿಕರು ಹಾಗೂ ವಾಹನ ಸಂಚಾರಕ್ಕೆ ಆಗುತ್ತಿರುವ ತೊಂದರೆಗಳನ್ನು ಕೂಡಲೇ ಸರಿಪಡಿಸಲು ಬಿ.ಎಂ.ಆರ್.ಸಿ.ಎಲ್ ಅಧಿಕಾರಿಗಳಿಗೆ ಪತ್ರ ಬರೆಯಲು ಮಾನ್ಯ ಅಧ್ಯಕ್ಷರು ಕಾಮಗಾರಿ ಇಲಾಖೆರವರಿಗೆ ಸೂಚಿಸಿರುತ್ತಾರೆ.
- ಬನ್ನೇರುಘಟ್ಟ ಮುಖ್ಯ ರಸ್ತೆಯ ಹುಳಿಮಾವು ಗೇಟ್ ಬಳಿ ಅರಕೆರೆ ಕೆರೆಗೆ ನೀರು ಬರಲು ಹಾಲಿ ಇರುವ ಕಲ್ವರ್ಟ್ ಮೇಲೆ ಕವರಿಂಗ್ ಇಲ್ಲದ ಕಾರಣ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು ಹಾಗೂ ಮಳೆ ಬಂದಾಗ ಹುಳಿಮಾವು ಬಸ್ ನಿಲ್ದಾಣದ ಹತ್ತಿರ ನೀರು ನಿಂತು ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿರುತ್ತದೆ. ಈ ಬಗ್ಗೆ ಈಗಾಗಲೇ ಟ್ರಾಫಿಕ್ ಪೋಲೀಸ್ ಇಲಾಖೆ ಅಧಿಕಾರಿಗಳು ಸಹ ದೂರು ನೀಡಿರುತ್ತಾರೆ.
- ಈ ಬಗ್ಗೆ ಎಲ್ಲಾ ಇಲಾಖೆಗಳು ಸ್ಥಳಪರಿಶೀಲಿಸಿ ಸ್ಥಳದಲ್ಲಿಯೇ ಸಭೆ ನಡೆಸಿ ತುರ್ತಾಗಿ ಸಮಸ್ಯೆ ಪರಿಹರಿಸಲು ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.
- ಸಭೆಯ ಸಮಯಕ್ಕೆ ಸರಿಯಾಗಿ ಎಲ್ಲಾ ಇಲಾಖೆಯ ಅಧಿಕಾರಿಗಳು ತಪ್ಪದೇ ಹಾಜರಿರಬೇಕಾಗಿ ಮಾನ್ಯ ಅಧ್ಯಕ್ಷರು ಸೂಚಿಸಿದರು.

ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸಿ.ಟಿ ಅಂಜನಪ್ಪ) 05/12/2020
ಸಹಾಯಕ ಕಾರ್ಯಪಾಲಕ ಅಭಿಯಂತರರು
ಅರಕೆರೆ ಉಪವಿಭಾಗ.

(ಎನ್ ರಮೇಶ್) 5/12
ನೋಡಲ್ ಅಧಿಕಾರಿ,
ವಾರ್ಡ್ ನಂ 193